Regd No B G 155

4—9—1965

ಸತ್ಯವಾದಿ

49 th Year
Satyavadi
DAILY
MYSORE 4

ಸಂಸ್ಥಾಪಕರು — ಅರವಿನೆ ಸಿಂಸ್ಕೇಡಾರ್ ಎಂ ವಿ ಸುಬ್ಬರಾಯುರು ಸಂಪಾದಕರು — ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣರಾವ್ 2 ಪೈಸೆ

ಹಿತೋಕ್ತಿ

ಈಗ ಕಾಶ್ಮೀರದಲ್ಲಿರುವ ಪರಿಸ್ಥಿತಿಗಮನಿಸಿ ಕೈಗಾರಿಕಾ ಶಾಂತಿ ಕಾಪಾಡಬೇಕು, ವಿವಾದವನ್ನು ಶಾಂತಿಯುತವಾಗಿ ಬಗೆಹರಿಸಿಕೊಳ್ಳಬೇಕು ಎಂದು ಭಾರತ ಸರ್ಕಾರದ ಕಾರ್ಮಿಕ ಮಂತ್ರಿ ಶ್ರೀ ಎಸ್. ಸಂಜೀವರೆಡ್ಡಿ ತಿಳಿಸಿದರು.

★

ಪ್ರಧಾನಿಗಳೊಡನೆ ಭೇಟಿ

ಮಾಜಿ ಸೇನಾಧಿಕಾರಿ ನಿಯೋಗ ನಿನ್ನೆ ನವದೆಹಲಿಯಲ್ಲಿ ಪ್ರಧಾನಿ ಶ್ರೀ ಲಾಲ ಬಹದ್ದೂರ್ ಶಾಸ್ತ್ರಿಯವರಿಂದ ಭೇಟಿ ಕಾಶ್ಮೀರ ಪೋರಾಟದಲ್ಲಿ ತಾವು ಸೇನೆ ಮಾಡುವುದಾಗಿ ಸೂಚಿಸಿದರು ಪ್ರಧಾನಿಯವರು ಇದಕ್ಕೆ ವೈಟ್ಟಿಕೆ ವ್ಯಕ್ತಪಡಿಸಿದರು.

★

ಮಾತುಕತೆ

ಬ್ರಿಟನ್ನಿನ ಹೈ ಕಮಿಷನರ್‌ರವರು ನಿನ್ನೆ ಪ್ರಧಾನಿ ಶಾಸ್ತ್ರಿಯವರನ್ನು ಭೇಟಿ ಮಾಡಿ ಕಾಶ್ಮೀರ ವಿಚಾರದಲ್ಲಿ ಮಾತುಕತೆ ನಡೆಸಿದರು.

●

ಕಾಶ್ಮೀರದಲ್ಲಿ ಅನೇಕ ಅಯುಧಗಳನ್ನು ಪಾಕಿಸ್ತಾನ ಬಳಸಿದ ಅಂಶವನ್ನು ಅಮೆರಿಕಾ ಪರಿಶೀಲಿಸುತ್ತಿದೆ.

ಮೈಸೂರು ರಾಜ್ಯದ 7 ಇಂಜಿನಿಯರಿಂಗ್ ಕಾಲೇಜುಗಳಲ್ಲಿ ತೆಗೆದುಕೊಳ್ಳಲಾಗುತ್ತಿರುವ ಕ್ಯಾಪಿಟೇಷನ್ ಶುಲ್ಕ ನಿಷ್ಪಸಿ ವುದಾಗಿ ಸರ್ಕಾರ ಮುಕ್ತ ವಿಶ್ವವಿದ್ಯಾನಿಲಯ ತಿಳಿಸಿಯುವುದಾಗಿ ಶಿಕ್ಷಣ ಮಂತ್ರಿ ಶ್ರೀ ಎಂ. ಸಿ ಚಾಗ್ಲಾ ತಿಳಿಸಿದರು.

★

ನಾಳೆಯ ಪಂಚಾಂಗ

ಬೈವಜ್ಞ ಶಿಖಾವಣಿ
ಅಸಾಸವಮಹಾವಿದ್ವಾ ಧರ್ಮಾಧಿಕಾರಿ
ರಾಜಕಾರ್ಯಾಪಕ್ಷ, ಜ್ಯೋತಿರ್ವಿದ್ಯಾಸಿಂಧಿ
ಪಂಡಿತ ಕೃಷ್ಣಜೋಯಿ ಸಂಪರಿಂದ
ಶುಭಾನು ದಕಮಿ ಮೂಲ

ವಿಮಾನಕ್ಕೆ ಏಟು

ಕಾಶ್ಮೀರದ ಪೂರ್ವಣೆಯ ಮೇಲೆ ಭಾರತದ ಮೇಲೆ ದಾಳಿ ಮಾಡಲು ಉಪಯೋಗಿಸಲಾದ ಎರಡು ಪಾಕಿ ಕಾ ವಿಮಾನಗಳನ್ನು ಹೊಡೆದು ಕಳಗುರುಳಿಸಲಾಯಿತು

★

ಮನವಿ

ಕಾಶ್ಮೀರ ಕಲಹ ವ್ಯಾಪಕವಾಗದಿರುವಂತೆ ಕದನ ವಿರಾಮಕ್ಕೆ ಅಸ್ಪ್ರೇಲಿಯ ಕರೆಕೊಟ್ಟಿದೆ

●

ಚಾಂಬ್ ಪ್ರದೇಶದ ಜರಿಯಲ್ಲಿ ಪಾಕಿಸ್ತಾನ ವಿಮಾನ ದಾಳಿಯಿಂದ ಮನೆದಿಯಲ್ಲಿ ಪ್ರಾರ್ಥನೆ ಮಾಡುತ್ತಿದ್ದ 50ಜನ ಮರಣಹೊಂದಿದರು

ಪಾಕಿಸ್ತಾನದ ಹದಿನೇಟು ಟ್ಯಾಂಕಗಳನ್ನು ನಾಶ ಮಾಡಲಾಗಿದೆ

ಪೂರ್ವ ಪಾಕಿಸ್ತಾನದ ಸುಮಾರು 2 ಸಾವಿರ ವಲಸೆಗಾರರ ಸಂಸಾರಗಳು 65-66 ರಲ್ಲಿ ಮುಂಗಡಪತ್ರಿಗೊಳ್ಳುವ ನೀರಿಕ್ಷೆ ಇದೆ ಇಷ್ಟೇ ಜನರಿಗೆ ಮುಂಗಡಪತ್ರಿ ಯೋಜನೆಗೆ 8 ಕೋಟಿ ರೂಪಾಯಿಗಳು ಖರ್ಚಾಗಿದೆ ಎಂದು ಪ್ರಕಟವಾಗಿದೆ

ಪಾರ್ಲಿಮೆಂಟಿನ ಕಾಂಗ್ರೆಸ್ ಸದಸ್ಯರೊಬ್ಬರಿಂದ ಕಾರಿನಲ್ಲಿ ಬೊಂಬಾಯಿನಲ್ಲಿ ಅಕ್ರಮ ಸಾಗಾಣಿಕೆ ಭಂಗಾರ ಎಷ್ಟು ಪತ್ತೆಮಾಡಿಕೊಳ್ಳಲಾಯಿತೆಂಬುದನ್ನು ತಿಳಿಸುವಂತೆ ಸ್ವೀಕರ್ರವರು ಲೋಕಸಭೆಯಲ್ಲಿ ಹಣಕಾಸು ಮಂತ್ರಿಯವರಿಗೆ ಸೂಚಿಸಿದರು

ಮಧ್ಯ ಪ್ರದೇಶ ಕಾಂಗ್ರೆಸ್ ಸರ್ಕಾರ ಅಲ್ಲಿನ ಪ್ರದೇಶ ಕಾಂಗ್ರೆಸ್ ಸಮಿತಿಯಿಂದ ಒಂಬೇಕಾದ, 57 ರಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನದ ಬಾಕಿಗಾಗಿ ಲಾಯಿರು ನೋಟೀಸು ಕೊಡಲು ನಿರ್ಧರಿಸಿದೆ.

ಮುಂದೆ ಕಠಿಣ ದಿನಗಳು

❋

ಪ್ರಧಾನಿಗಳ ಭಾಷಣ

ಭಾರತ ಪ್ರಧಾನಿ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು ನಿನ್ನೆ ರಾತ್ರಿ ರಾಷ್ಟ್ರವನ್ನುದ್ದೇಶಿಸಿ ಭಾಷಣ ಮಾಡುತ್ತಾ, ಕಾಶ್ಮೀರ ಹೋರಾಟದಲ್ಲಿ ನಮ್ಮ ಪಡೆಗಳು ಕರ್ತವ್ಯ ನಿರ್ವಹಣೆ ಮಾಡಿವುದು ಎಂದು ನುಡಿದರು. ದಾಳಿ ಕಾರಂಭಿಸಿ ಹಿಮ್ಮೆಟ್ಟಿಸುವುದರಲ್ಲಿ ನಮ್ಮ ಪಡೆಗಳು ಯಶಸ್ವಿ ಆಗಿದೆ ಎಂದು ತಿಳಿಸಿದರು

ಕಾಶ್ಮೀರದಲ್ಲಿ ಸ್ವತಂತ್ರ ಹೋರಾಟಗಾರರು ಕಾರ್ಯ ನಡೆಸುತ್ತಿರುವರು ಎಂಬುದಾಗಿ ಆಧ್ಯಕ್ಷ ಅಯೂಬರು ತಿಳಿಸಿದ್ದರು ಆದರೆ ನಿಜಾಂಶ ಈಗ ಪ್ರಪಂಚಕ್ಕೆ ತಿಳಿದಿದೆ ಎಂದ ಅವರು ನುಡಿದರು

ವಿಶ್ವಸಂಸ್ಥೆಯು ಪ್ರಧಾನ ಕಾರ್ಯದರ್ಶಿ ಉ ಥಾಂಟರು ಶಾಂತಿ ಕರೆ ನೀಡಿರುವುದನ್ನು ಪ್ರಧಾನಿಯವರು ಪ್ರಸ್ತಾಪ ಮಾಡಿ, ನವರಿಗೆ ಶಾಂತಿ ಬೇಕು ಅದರಿಂದ ನಿಜಾಂಶವನ್ನು ಅರಿಯಬೇಕು ಎಂದರು

ಮುಂದೆ ಕಷ್ಟದ ದಿನಗಳಿವೆ ತ್ಯಾಗ ಮಾಡಿ ನಾವು ಸಿದ್ಧರಾಗಬೇಕು ಸರ್ವ ಉತ್ಪಾದನೆಗಳನ್ನೂ ನಾವು ಹೆಚ್ಚಿಸಿಕೊಳ್ಳಬೇಕು ಎಂದು ಅವರು ನುಡಿದರು.

⛃

ಮತ್ತೆ ವಿಮರ್ಶಿಸಿ

ಶಾಸನ ಸಭೆ ಸದಸ್ಯರಾದ ಶ್ರೀ ಎಸ್ ಎಂ ಕೃಷ್ಣರವರು ಬೆಂಗಳೂರಿನಲ್ಲಿ ಹೇಳ್ಕೆಯನ್ನಿಸಿದ್ದು, ಸೈಕಲ್‌ತೆರಿಗೆ ಬಗ್ಗೆ ಸರ್ಕಾರ ಮತ್ತೆ ಪರಿಶೀಲಿಸಬೇಕೆಂದು, ಇಲ್ಲದಿದ್ದರೆ ಸ್ಥಳೀಯ ಪ್ರಜಾಪ್ರಭುತ್ವಕ್ಕೆ ಅರ್ಥವಿಲ್ಲವೆಂದು ತಿಳಿಸಿದರು

❋

ಹೊಸಪೇಟೆ ಸಕ್ಕರೆ ಕಾರ್ಖಿಕರ ಮುಷ್ಕರ ಮುಂದುವರಿಯುತ್ತಿದೆ

ವಾರ್ತಾ ವಿಶೇಷಗಳು

ಈ ವರ್ಷ ಅಕ್ಕಿ ವಿತ್ತು ಗೋಧಿಯನ್ನು ಹೆಚ್ಚಾಗಿ ಉಪಯೋಗಿಸಿಕೊಳ್ಳಲಾಗುವುದು ಎಂದು ನವದೆಹಲಿಯ ವಾರ್ತೆ

ಬೆಳಗಾವಿನ ಹೊಟೇಲು ಕಾರ್ಮಿಕರ ಸಂಘವು ಪಾಕೀಸ್ತಾನಿ ಮೇಲೆ ಹೂಡಿದಾಡುತ್ತಿರುವ ನಮ್ಮ ಜವಾನರಿಗೆ 2 ನೂರು ಬ್ಲಾಂಕೆಟ್ಟುಗಳನ್ನು ಕೊಟ್ಟಿದೆ.

ಮೈಸೂರು ಸಿಟಿ ನಿರಂಬಾದು ಮೊಹಲ್ಲಾದ ಇಟ್ಟಿಗೆಗೂಡಿನಲ್ಲಿ ವಾಸಿಸುತ್ತಿರುವ ಬಡ ಕುಟುಂಬದ ಎದುರಿನಲ್ಲಿರುವ ವಿಶಾಲವಾದ ಪ್ರಾಥಮಿಕ ಶಾಲಾ ಕಟ್ಟಡದ ಶಂಕುಸ್ಥಾಪನೆಯನ್ನು ಈ ದಿನ ಬೆಳಿಗ್ಗೆ ಶ್ರೀ ಎಸ್. ಲಿಂಗಣ್ಣನವರು ನೆರವೇರಿಸಿದರು

ಪಿರೇಸಂದ್ರ ತಾಲ್ಲೂಕು ಬೋರ್ಡ್ ಹೈಸ್ಕೂಲಿನ ನೂರೆಂಟುಜನ ವಿದ್ಯಾರ್ಥಿಗಳು-ಅನ್ನಸತ್ಯಾಗ್ರಹ ಆಚರಿಸಿದರೆಂದು ಬೆಳ್ಳಬಳ್ಳಾಪುರಿ ವಾರ್ತೆ ಇಲ್ಲಿ ಮುಖ್ಯೋಪಾಧ್ಯಾಯರೆ ಎಲ್ಲ ತರಗತಿಗಳನ್ನು ನೋಡಿಕೊಳ್ಳಬೇಕಾಗಿದೆ ದಿನಕ್ಕೆ 2 ಗಂಟೆ ಕಾಲ ಮಾತ್ರ ಶಿಕ್ಷಣ ಕೊಡಲಾಗುತ್ತದೆ

ಶೃಂಗೇರಿ ಜಗದ್ಗುರುಗಳವರು ಸೆರಂನಲ್ಲಿ ಸಂದೇಶವಿತ್ತು, ಎಲ್ಲಾ ಭಾರತೀಯರೂ ದೇವರಲ್ಲಿ ಪೂರ್ಣ ಭಕ್ತಿಯಿಟ್ಟು ದೇಶದ ಕಲ್ಯಾಣಕ್ಕೆ, ಅದರಲ್ಲೂ ಈ ಸಮಯದಲ್ಲಿ ಶತ್ರುಗಳಿಂದ ನಮ್ಮ ಗಡಿ ಉಲ್ಲಂಘನೆ ಆಗುತ್ತಿರುವಾಗ ಪ್ರಾರ್ಥನೆ ಮಾಡಬೇಕೆಂದು ತಿಳಿಸಿರುವರು

ನಾಲ್ಕನೆ ಯೋಜನೆಯಲ್ಲಿ ಸುಮಾರು 5 ಸಾವಿರ ಗ್ರಾಮಗಳಿಗೆ ವಿದ್ಯುದ್ದೀಪ ಪಾಕಿಸಲಾಗುವುದೆಂದು ಬಿ ಗ ಳೂ ರು ವಾರ್ತೆ

67 ನೇ ನವೆಂಬರು 7ರಂದು ಅಂಖ ರಾಷ್ಟ್ರ ಪಸ್ಯಾಹಾರ ಕಾಂಗ್ರೆಸುಗಳ ಪಶ್ಚೀಕರಣ ನಡೆಯುತ್ತಿದೆ

ಸರ್ವ ರೋಗ ನಿವಾರಿಣಿ ಡಿ ಎಂ ಎಸ್ ಒ

ಇದೋ, ಇದಂ ಹೆಸರು ನಾರಾಯಣ ತೈಲ ! ಕಫ ಕಟ್ಟಿಕೊಂಡಿದ್ದ ಒಂದು ಚವಚದ ನೀರಿನಲ್ಲಿ ಇದನ್ನು ಒಂದು ತೊಟ್ಟು ಹಾಕಿ ಕುಡಿಯಿರಿ ; ತಲೆ ನೋವೇ ? ತಲೆಯ ಎಡ ಬಲಕ್ಕಗಳಿಗೂ ಒಂದೊಂದು ತೊಟ್ಟನ್ನು ಸವರಿಬಿಡಿ ; ಹೊಟ್ಟೆಶೂಲೆ ಇದ್ದರೆ ಮಜ್ಜಿಗೆಯಲ್ಲಿ ಹಿಂದು ತೊಟ್ಟು ಹಾಕಿ ಸೇವಿಸಿ ; ವಾಕ್ಕಳಿಗೆ ಎಣ್ಣೆ ಕೊಡುವಾಗ ಕೈಯಣ್ಣೆಯೊಂದಿಗೆ ಇದರ ಒಂದು ತೊಟ್ಟನ್ನು ಸೇರಿಸಿ; .... ಹೀಗೇ ಒಂದೇಒಂದು ಔಷಧಿಯ ನಿಟ್ಟಕೊಂಡು, ಜೇರೆಬೇರೆ ರೋಗಗಳಿಗೆ ಬೇರೆಬೇರೆ ರೀತಿಯ ಪ್ರಯೋಗಗಳನ್ನು ಹೇಳುತ್ತಾ ಬರುತ್ತಾರೆ, ಕೆಲವು ನೇಟಿವ್ ಪಂಡಿತರು,

ಬರ್ಲಿನ್— ಆದರೆ ಪಶ್ಚಿಮ ಜರ್ಮನಿಯ ವೈದ್ಯರು ಇಂತಹುದೊಂದು ಔಷಧವನ್ನು ಕಂಡುಹಿಡಿದಿದ್ದಾರೆಂಬುದೇ ಇಲ್ಲಿನ ಮುಖ್ಯ ಅಂಶ. ಡೈವಿಾಥೈಲ್ ಸ್ಫರೆ ಅಕ್ಸೈಡ್ ಅಥವಾ ಡಿ ಎಂ ಎಸ್ ಓ ಎಂಬುದೇ ಅದರ ಹೆಸರು ; ಸ್ಪಟಿಕದಂತೆ ತಿಳಿಯಾದ ದ್ರಾವಕ ; ಇದರ ಪ್ರಭಾವ ಅಪ್ಪಿಷ್ಟಲ್ಲ ; ಎಷ್ಟೋ ಸಣ್ಣಪುಟ್ಟ ಉಪಯೋಗಗಳಿಂದಲ್ಲಿ ಇದ್ದರೂ, ಇದರಿಂದ ನಾಲ್ಕು ಮುಖ್ಯವಾಗಿ ಉಷಯೋಗಗಳನ್ನು ಸೂಚಿಸಲಾಗಿದೆ : ಎ ಎಂ ಎಸ್ ಓ ಕೆಲವೇ ತೊಟ್ಟಗಳನ್ನು ದೇಹದ ಯಾವುದಾದರೂ ಭಾಗದಲ್ಲಿ ಚರ್ಮದ ಮೇಲೆ ಹಾಕಿಕೊಂಡರೆ ಸಾಕು, ಒಡನೆಯೇ ಅದು ಒಳಗಿಳಿದು, ರಕ್ತದಲ್ಲಿ ಸೇರಿ, ದೇಹವೆಲ್ಲಾ ಹರಡಿ, ಅನೇಕ ಬಗೆಯ ಔಷಧಾಮಗ್ರನ್ನು ಮಾಡುವುದು ; ದೇಹದ ಯಾವುದಾದರೂ ಭಾಗದಲ್ಲಿ ನೋವಿದ್ದರೆ ಅದಕ್ಕೆ ಡಿ ಎಂ ಎಸ್ ಓ ರಾಮಬಾಣ ! ರೋಗವು ಸೋಕಿಂತು ಹಾಂಡವಂತೆ ಇದು ರಕ್ಷಿಸುತ್ತದೆ ! ವಿಷಕ್ರಿಮಿಗಳು ಹುಟ್ಟಿಕೊಳ್ಳದಂತೆ ಈ ಔಷಧವು ನೋಡಿಕೊಳ್ಳುತ್ತದೆ. (ಯು ಪಿ ಎಸ್)

★

ಶ್ರೀನಗರದಲ್ಲಿ ನೈಕೆ

ಭಾರತ ರಕ್ಷಣಾ ಪಡೆಯು ಹಾಚಿ ಪೀಠ ಕಣಿವೆ ಮತ್ತು ಉರಿಯಲ್ಲಿ ಕೆಲವು ಠಾಣೆಗಳನ್ನು ವಶಪಡಿಸಿಕೊಂಡ ಸಂತೋಷವಾರ್ತೆ ಕೇಳಿ ವಿದ್ಯಾರ್ಥಿಗಳು ಬಸ್ಕೆರಸ್ತೆಗಳಲ್ಲೆಲ್ಲಾ ಸಂಚಾರಕ್ಕೆ ಅತಂವಾಗುವಷ್ಟು ಕಣಿದ್ದಾಡಿದರು.

Help The Gorakshana

ಗೋರಂಕ್ಷಣೆಕ್ಕೆ ಬೆಂಬಲ ನೀಡಿ



ಶ್ರೀ ದ್ವಾರಕಾ ಜಗದ್ಗುರು ಮಹಾಸನ್ನಿಧಿಗಳವರ, ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಉದಾರ ಅನುಗ್ರಹ ಕೃಪೆಯಾಗಿದೆ

ಕರ್ನಾಟಕದಾದ್ಯಂತ ಗೋರಂಕ್ಷಣೆ, ಪಶುಪಾಲನೆ, ಪಶು-ವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ದೃಷ್ಟಿಪತ್ರಿಕೆ ; ವಾರ್ಷಿಕ ಚಂದ 50 ನ್ಯೆಸೆ.

ಸಹಾಯಕರು ರೂ 10, ಪೋಷಕರು ರೂ 25 ; (ಒಂಬತ್ತು ಸಾರಿ ಮಾತ್ರ)

ಗೋರಂಕ್ಷಣೆಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕ ವಾಗಿ ಸ್ವೀಕರಿಸಲಾಗುವುದು

ಪುಡಪಾಂಡ್ಸ್ ಜನಭರಿತ 2 ನೇ ವಾರ

ನೀವು ಇದುವರಿಗೂ ನೋಡದಿರುವ ಅದ್ಭುತ ದೃಶ್ಯಗಳನ್ನೂ, ವಿಚಿತ್ರಗಳನ್ನೂ ನೋಡಿ ಆನಂದಿಸಿ

ಭೂತ್ ಬಂಗ (ಹಿಂದಿ) Bhoot Bangla

ಮುಮತಾಜ್, ಶನುಜ, ನಾಜಿರ್ ಹುಸೇನ್, ಆಸಿತ್ ಸೇನ್ ನಾನಾವಾಲ್ ಸಿಕಂದ್

ಪ್ರತಿ ದಿನ 3 ಪ್ರದರ್ಶನಗಳು

ಅಪೆರ— ಜನಭರಿತ 2 ನೇ ವಾರ

ವೀರ ಅಭಿಮನು (ತೆಲುಗು)

ನಿರ್ಮಾತೃ— ಎಸ್ ಟಿ ರಾಮರಾವ್, ಕಾಂಚನ, ಕಾಂತಾರಾವ್, ಕಾಡನಾಲ ಪದ್ಮನಾಭಂ, ಸೂರ್ಯಪ್ರಭಾ, ಜಿ ವರಲಕ್ಷ್ಮಿ | ದಿನ 3 ಆಟಗಳು

SHAKTI SUDHA

A Superb Tonic

Protect the Cow

ಗೋಸಂರಕ್ಷಣೆ ಮುಖ್ಯ, ವ್ಯಾಪಕವಾಗಿ ಕಾರ್ಯಗಳು ಹೆಚ್ಚಾಗಿ ನಡೆಯಲಿ

ಆಶೋಕ ಏಜೆನ್ಸೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ

ರೋಗಿಗಳಿಗೆ ಸೂಕ್ತ ಔಷಧಿ ಕೊಡಲಾಗುತ್ತದೆ

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharma prachare niratha M S Krishna Rao (Proprietor) at the Satyavadi Press Chamarajapuram, Mysore 4